ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. **182/2021**

ಪಿ.ಡಬ್ಲೂ-**2**

ದಿಃ **25.07.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಶರತ್ ಬಾಬು |
| ಗಂಡ/ತಂದೆಯ ಹೆಸರು | ಬೆನವೆಗೌಡ |
| ವಯಸ್ಸು | ಸುಮಾರು 41 ವರ್ಷ |
| ಕೆಲಸ | ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಚಿಲ್ಕುಂದ ಶಾಖೆ |
| ವಾಸಸ್ಥಳ | ಹುಣಸೂರು |

<u>ಮುಖ್ಯ ವಿಚಾರಣೆ ಪಿರ್ಯಾದುದಾರರ ಪರ ಶ್ರೀ ಸಿ.ಟಿ.ಎನ್. ವಕೀಲರಿಂದಃ</u>

ನಾನು ದಿಃ 16.05.2024 ರಿಂದ ಇಲ್ಲಿಯವರೆಗೂ ಕರ್ನಾಟಕ ಬ್ಯಾಂಕ್, ಚಿಲ್ಕುಂದ ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ.

ನ್ಯಾಯಾಲಯದಿಂದ ನನಗೆ ಸಾಕ್ಷ್ಯ ನುಡಿಯುವಂತೆ ಸಮನ್ಸ್ ಬಂದ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು ಇಂದು ನ್ಯಾಯಾಲಯಕ್ಕೆ ಆರೋಪಿಗೆ ಸೇರಿದ ಖಾತೆಯ Specimen ಹಸ್ತಾಕ್ಷರದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿ ಮೂಲ ದಾಖಲಾತಿಗಳನ್ನು ದೃಢೀಕೃತ ದಾಖಲಾತಿಗಳೊಂದಿಗೆ ತಾಳೆ ನೋಡಿ ನಿಪಿ-7, 7(ಎ) ರಿಂದ (ಡಿ) ಎಂದು ಗುರುತಿಸಲಾಯಿತು. ಆರೋಪಿಗೆ ಸಂಬಂಧಿಸಿದ ಖಾತೆಯ ದಿಃ 01.01.2018 ರಿಂದ ದಿಃ 16.04.2024 ರವರೆಗಿನ ಖಾತಾ ಎಕ್ಸ್‌ಟ್ರ್ಯಾಕ್ಟನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿಃ 07.10.2020 ರಲ್ಲಿ ಆರೋಪಿಗೆ ಸೇರಿದ ಖಾತೆಯಲ್ಲಿ ಹಣ ಇರಲಿಲ್ಲ. ನಿಪಿ-1 ರಂತೆ ಚೆಕ್ ಆರೋಪಿಗೆ ಸೇರಿದ್ದು.

<u>ಪಾಟೀ ಸವಾಲು ಆರೋಪಿ ಪರ ವಕೀಲರು ಶ್ರೀ ಸಿ.ಎಸ್.ಎನ್. ವಕೀಲರಿಂದಃ</u>

2020 ರಿಂದ ಇಲ್ಲಿಯವರೆಗೂ ಆರ್,ಬಿ.ಐ ನಿರ್ದೇಶನದಂತೆ ಚೆಕ್ ನ್ನು ಮಾನ್ಯತೆ ಹಾಗೂ ಅಮಾನ್ಯತೆ ಬಗ್ಗೆ ನಿಯಮ ಅನುಸರಿಸಬೇಕು ಎಂದರೆ ಸರಿ. ಯಾವುದೇ ಚೆಕ್ ನಗದೀಕರಣಕ್ಕೆ ಬಂದಾಗ, ಸದರಿ ಚೆಕ್ ನಲ್ಲಿ ಲೋಪದೋಷಗಳಿದ್ದರೇ, ಯಾವ ಕಾರಣಕ್ಕಾಗಿ ಚೆಕ್ ಅಮಾನ್ಯವಾಗುತ್ತದೆಂಬ ಬಗ್ಗೆ ನಿರ್ದಿಷ್ಟವಾಗಿ ನಮೂದಿಸಬೇಕೆಂದರೆ ಸರಿ. ಚೆಕ್ ನಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಯಾರು ನಗದೀಕರಣಕ್ಕೆ ಚೆಕ್ ನ್ನು ಸಲ್ಲಿಸಿರುತ್ತಾರೋ ಅವರಿಗೆ ಆ ಕಾರಣವನ್ನು ನಮೂದಿಸಿ ವಾಪಸ್ಸು ನೀಡಬೇಕೆಂದರೆ ಸರಿ.

ನಿಪಿ-1 ರಲ್ಲಿ ಅಕ್ಷರ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 1 ಎನ್ನುವ ಅಂಕಿಯ ಮೇಲೆ 4 ಅಂಕಿಯನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ತಿದ್ದುಪಡಿ ಮಾಡಿದ್ದರೂ, ಪಿರ್ಯಾದುದಾರರೊಂದಿಗೆ ಶಾಮೀಲಾಗಿ ನಿಪಿ-1 ರಂತೆ ಚೆಕ್ ನ್ನು ಮಾನ್ಯ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 1 ಎನ್ನುವ ಅಂಕಿಯ ಮೇಲೆ 4 ಅಂಕಿಯನ್ನು ತಿದ್ದಿದ್ದರೂ, ನಿಪಿ-2 ರಂತೆ ಸುಳ್ಳು ಹಿಂಬರಹ ನೀಡಿರುತ್ತೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.